JULY 25, 2025

# AKASHAVANI - DHARWAD

# PRADESH SAMACHARA (KANNADA) 12 PM

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

ಕರ್ನಾಟಕ ನಾಟಕ ಅಕಾದೆಮಿ ಕೊಡಮಾಡುವ, 2025–26 ನೇ ಸಾಲಿನ 'ಜೀವಮಾನ ಸಾಧನೆ', ಪ್ರಶಸ್ತಿಗೆ ಕಲಾ ನಿರ್ದೇಶಕ ಶಶಿಧರ ಅಡಪ, ವಾರ್ಷಿಕ ಪ್ರಶಸ್ತಿಗೆ ರಂಗ ವಿಮರ್ಶಕ ಜಿ.ಎನ್ ಮೋಹನ್ ಸೇರಿದಂತೆ 25 ಜನರು ಆಯ್ಕೆಯಾಗಿದ್ದು, ಏಳು ಜನ ಸಾಧಕರು ದತ್ತಿ ನಿಧಿ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಜೀವಮಾನ ಸಾಧನೆ ಪ್ರಶಸ್ತಿಯು 50 ಸಾವಿರ ರೂಪಾಯಿ ನಗದು ಹಾಗೂ ನಟರಾಜ ವಿಗ್ರಹ ಒಳಗೊಂಡಿರುತ್ತದೆ. 25 ಸಾವಿರ ರೂಪಾಯಿ ನಗದು ಹಾಗೂ ನಟರಾಜ ವಿಗ್ರಹ ಒಳಗೊಂಡ, ವಾರ್ಷಿಕ ಪ್ರಶಸ್ತಿಗೆ ಭಾಜನರಾದ ರಂಗಕರ್ಮಿ, ಧಾರವಾಡದ ಗೋಪಾಲ ಉಣಕಲ್, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಧ್ವನಿ: ಗೋಪಾಲ ಉಣಕಲ್ 38 ಸೆಕೆಂದುಗಳು

<><><>

ಶುಂಠಿಗೆ ಶಿಲೀಂಧ್ರ ಬಾಧೆಯಿಂದ, ಎಲೆ ಚುಕ್ಕೆ ಅಥವಾ ಬೆಂಕಿ ರೋಗ ಕಾಣಿಸಿಕೊಂಡಿದ್ದು, ಕೊಡಗು, ಹಾಸನ, ಮೈಸೂರು ಹಾಗೂ ಚಿಕ್ಕಮಗಳೂರು ಜಿಲ್ಲೆಯಲ್ಲಿ, ವ್ಯಾಪಕವಾಗಿ ಹಬ್ಬುತ್ತಿದೆ. ಶುಂಠಿ ಬೆಳೆಗಾರರು ಸೂಕ್ತ ನಿರ್ವಹಣಾ ಕ್ರಮಕ್ಕೆ ಮುಂದಾಗದಿದ್ದರೆ, ಮುಂಬರುವ ಎರಡು ವಾರಗಳಲ್ಲಿ, ಬೆಳೆ ಸಂಪೂರ್ಣ ಒಣಗಿಬಿಡುತ್ತದೆ ಎಂದು, ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯದ, ತಜ್ಞರ ತಂಡ ಕ್ಷೇತ್ರ ಸಂಶೋಧನೆ ಕೈಗೊಂಡು, ಮಾಹಿತಿ ನೀಡಿದೆ. ತೆಂಗಿನ ತೋಟಗಳಲ್ಲಿ, ಶುಂಠಿ ಬೆಳೆದಿರುವ ಕಡೆ, ರೋಗ ಹೆಚ್ಚು ಉಲ್ಬಣಿಸಿದೆ. ರೋಗದ ನಿರ್ವಹಣೆಗಾಗಿ, ತೋಟಗಾರಿಕೆ ವಿಶ್ವವಿದ್ಯಾಲಯದ ತಜ್ಞರನ್ನು ಸಂಪರ್ಕಿಸಲು ಕೋರಲಾಗಿದೆ.

<><><>

**Assistance to Disabled Persons for Purchase, fitting of Aids and Appliances scheme – ADIP,** ಕೇಂದ್ರ ಪುರಸ್ಕೃತ ಯೋಜನೆ ಅಡಿ, ಕಾರವಾರ ತಾಲೂಕಿನ, 129 ವಿಶೇಷಚೇತನರಿಗೆ, 11 ಲಕ್ಷದ 54 ಸಾವಿರ ರೂಪಾಯಿ ಮೌಲ್ಯದ, 359 ಉಚಿತ ಸಾಧನ ಸಲಕರಣೆಗಳನ್ನು, ಶಾಸಕ ಸತೀಶ ಸೈಲ್ ವಿತರಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಅಡಿಪ್ ಹಾಗೂ ಸುಗಮ್ಯ ಭಾರತ ಯೋಜನೆ ಅಡಿ, ವಿಶೇಷಚೇತನರಿಗೆ, ಅಗತ್ಯ ಸೌಲಭ್ಯ, ಸಾಧನ, ಸಲಕರಣೆಗಳನ್ನು ಒದಗಿಸಲು, ಅನುಕೂಲ ಕಲ್ಪಿಸಲಾಗಿದೆ. ಸಾಧಿಸಲು ಅವಕಾಶಗಳನ್ನು ಸೃಷ್ಟಿಸಲಾಗುತ್ತಿದೆ ಎಂದರು.

<><><>

ಪಂಚಖಾತ್ರಿ ಯೋಜನೆ ಪೈಕಿ, ಅನ್ನಭಾಗ್ಯದಡಿ ಫಲಾನುಭವಿಗಳಿಗೆ ನೀಡಲಾಗುತ್ತಿರುವ ಅಕ್ಕಿ, ಕಾಳಸಂತೆಕೋರರ ಪಾಲಾಗದಂತೆ ತಡೆಯಲು, ಉತ್ತರಕನ್ನಡ ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ಕಾರ್ಯಪಡೆ ರಚಿಸಿದ್ದಾರೆ. ತೆಹಸೀಲ್ದಾರ ಅಧ್ಯಕ್ಷತೆಯಲ್ಲಿ, ವಿವಿಧ ಇಲಾಖೆಗಳ ಅಧಿಕಾರಿಗಳನ್ನು, ಈ ತಂಡದಲ್ಲಿ ಅವರು ಸೇರ್ಪಡೆ ಮಾಡಿದ್ದಾರೆ. ಅಕ್ಕಿ ಮಿಲ್, ಹೊಟೇಲ್, ಕಿರಾಣಿ ಅಂಗಡಿಗಳು, ಗೊದಾಮು ಹಾಗೂ ಸಾರಿಗೆ ವಾಹನಗಳ ಮೂಲಕ, ಅನಧಿಕೃತವಾಗಿ ಅನ್ನಭಾಗ್ಯ ಯೋಜನೆ ಅಕ್ಕಿ ಬಳಕೆ ಅಥವಾ ಸಾಗಣೆ ಕಂಡುಬಂದಲ್ಲಿ, ಆವಶ್ಯಕ ವಸ್ತುಗಳ ಕಾಯ್ದೆ 1955ರ ಅಡಿ ಪ್ರಕರಣ ದಾಖಲಿಸಲು, ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

<><><>

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಳೆ ಮುಂದುವರಿದಿದೆ. ಭಾರಿ ಮಳೆ ಮುನ್ಸೂಚನೆ ಹಿನ್ನೆಲೆ ರೆಡ್ ಅಲರ್ಟ್ ಘೋಷಿಸಲಾಗಿದೆ. ಜಿಲ್ಲೆಯ ಎಲ್ಲ ಅಂಗನವಾಡಿ, ಪ್ರಾಥಮಿಕ, ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳಿಗೆ ಇಂದು ರಜೆ ಘೋಷಿಸಲಾಗಿದೆ.

ನಿರಂತರ ಮಳೆ ಹಿನ್ನೆಲೆ, ಇದುವರೆಗೆ 11 ದಶಾಂಶ 733 ಹೆಕ್ಟರ ಪ್ರದೇಶದ ತೋಟಗಾರಿಕಾ ಬೆಳೆಗಳು ನಾಶವಾಗಿವೆ.

<><><>

1-0-8-9 ಸಹಾಯವಾಣಿ ಮೂಲಕ ಮಾಹಿತಿ ನೀಡಿ, ಬಾಲ್ಯ ವಿವಾಹ ತಡೆಗಟ್ಟಿ, ಮಂಡ್ಯ ಜಿಲ್ಲೆಯನ್ನು, ಬಾಲ್ಯ ವಿವಾಹ ಮುಕ್ತ ಜಿಲ್ಲೆಯನ್ನಾಗಿಸುವ ಸಂಕಲ್ಪ ಮಾಡಿ, ಎಂದು, ಶ್ರೀರಂಗಪಟ್ಟಣ ತಾಲೂಕು ಆರೋಗ್ಯಾಧಿಕಾರಿ, ಡಾಕ್ಟರ್ ಗಣೇಶಪ್ರಸಾದ, ಪ್ರೌಢ ಶಾಲೆ ವಿದ್ಯಾರ್ಥಿನಿಯರಿಗೆ, ಮನವಿ ಮಾಡಿದ್ದಾರೆ. ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲೂಕು, ಬೆಳಗೊಳ ಗ್ರಾಮದ, ಸರ್ಕಾರಿ ಪ್ರೌಢ ಶಾಲೆಯಲ್ಲಿ, ಬಾಲ್ಯ ವಿವಾಹ ನಿ ೀಧ ಕಾಯ್ದೆ ಕುರಿತ, ಅರಿವು ಕಾರ್ಯಾಗಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಬಾಲ್ಯ ವಿವಾಹ ಸಾಬೀತಾದರೆ, ಕಾನೂನಿನಡಿ 2 ವ ್ಷ ಜೈಲು ಶಿಕ್ಷೆ ಹಾಗೂ 1 ಲಕ್ಷ ರೂಪಾಯಿ ದಂಡ ಹಾಕಬಹುದು, ಎಂದರು.

<><><>

ಬಾಗಲಕೋಟೆ ಜಿಲ್ಲೆಯಲ್ಲಿ, ಕಳೆದ ಮೂರು ವರ್ಷಗಳಲ್ಲಿ ಮಕ್ಕಳು ಹಾಗೂ ತಾಯಂದಿರಿಗೆ ಸಂಬಂಧಿಸಿದಂತೆ, ದಾಖಲಾದ ಪ್ರಕರಣಗಳ ಕುರಿತು ವಿವರವಾದ ಮಾಹಿತಿಯನ್ನು ಎರಡು ವಾರಗಳ ಒಳಗೆ ಸಲ್ಲಿಸುವಂತೆ, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಕೆ. ನಾಗಣ್ಣ ಗೌಡ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

<><><>

ವಿಜಯಪುರ ಜಿಲ್ಲೆಯ ಎಲ್ಲ ಗ್ರಾಮ ಆಡಳಿತ ಕಚೇರಿಗಳಲ್ಲಿ, ಈ ತಿಂಗಳ 28 ರಿಂದ ಆಗಸ್ಟ್ 6 ರ ವರೆಗೆ ವಿಶೇಷ, ಇ-ಪೌತಿ ಆಂದೋಲನ ಆಯೋಜಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾಕ್ಟರ ಆನಂದ. ಕೆ ತಿಳಿಸಿದ್ದಾರೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ

<><><>